# ಪುಸ್ತಕ ಓದು

ಪ್ರಶಾಂತ್ ಎಸ್. ಭಟ್

### ಪುಸ್ತಕ ಯಾರಿಗೆ?

**ಸ್ನೇ**ಹಿತರೊಬ್ಬರ ಮನೆಗೆ ಹೋದಾಗ ಪುಸ್ತಕದ ಬೀರುವೊಂದನ್ನು ಹೆಮ್ಮೆಯಿಂದ ತೋರಿಸಿದರು. ಕಲಾತ್ಮಕವಾಗಿ ತಯಾರಿಸಿದ ಬೀರು ನಿಜಕ್ಕೂ ಸುಂದರವಾಗಿದ್ದುದರ ಜೊತೆಗೆ, ಗಟ್ಟಿಮುಟ್ಟಾಗಿಯೂ ಇತ್ತು. "ನೋಡಿ ಸಾರ್, ನಮ್ಮ ಮಗುವಿನ ಕೈಗೆ ಯಾವ ಪುಸ್ತಕ ಸಿಕ್ಕರೂ ಗೀಚುತ್ತದೆ ಇಲ್ಲವೇ ಹರಿದು ಹಾಕಿಬಿಡುತ್ತದೆ. ಆದ್ದರಿಂದ ಅದರ ಕೈಗೆಟುಕದಂತೆ ಜೋಪಾನವಾಗಿ ಇರಿಸಿದ್ದೇನೆ" ಎಂದು ಹೆಮ್ಮೆಯಿಂದ ಅವರು ಹೇಳುತ್ತಿದ್ದರು. ಆಗ ಗೊತ್ತಾಯಿತು, ಬೀರುವಿನ ಉಪಯೋಗ ಏನೆಂದು. ಮಗುವಿನ ಕೈಗೆ ಎಟುಕದಂತೆ ಪುಸ್ತಕಗಳನ್ನು ಹೇಗಿಡಬೇಕೆಂಬುದೇ ಎಲ್ಲರ ಮನೆಯಲ್ಲಿಯೂ ಕಂಡುಬರುವ ಸಾಮಾನ್ಯ ಸಮಸ್ಯೆ. ಇಲ್ಲಿ ಒಂದು ಪ್ರಶ್ನೆ ಹುಟ್ಟುತ್ತದೆ. **ಮಗುವಿನ ಕೈಯಿಂದ ಪುಸ್ತಕವನ್ನು ಏಕೆ ತಾನೆ ದೂರವಿಡಬೇಕು?**

ಹೌದು. ಮಗು ಪುಸ್ತಕವನ್ನು ಹರಿಯಬಹುದು ಅಥವಾ ಪೆನ್ನೋ ಪೆನ್ಸಿಲ್ಲೋ ಸಿಕ್ಕರೆ ಗೀಚಬಹುದು. ಹಿರಿಯರು ಕಾಗದದ ಮೇಲೆ ಬರೆಯುತ್ತಾರೆ, ಕೆಲವೊಮ್ಮೆ ಕಾಗದವನ್ನು ಹರಿಯುತ್ತಾರೆ. ಮಗು ಇದನ್ನೇ ಅನುಕರಣೆ ಮಾಡುವುದಲ್ಲವೇ? ಕಾಗದವನ್ನು ಹರಿಯುವಾಗ ಉಂಟಾಗುವ ಶಬ್ದ ಹಾಗೂ ನೆಲವೆಲ್ಲಾ ಹರಡಿಕೊಳ್ಳುವ ಬಣ್ಣಬಣ್ಣದ ಚಿತ್ರವಿಚಿತ್ರ ಆಕಾರದ ಕಾಗದದ ಚಿಂದಿಗಳೇ ಮಗುವಿಗೆ ಮುಖ್ಯ ಆಕರ್ಷಣೆಗಳು. ಮಗುವು ಹೀಗಿರುವುದು ಸ್ವಲ್ಪ ವರ್ಷಗಳು ಮಾತ್ರ. ಅದು ದೊಡ್ಡದಾದಂತೆ ಹಿರಿಯರು ಓದುವುದನ್ನು ನೋಡಿ ಅದನ್ನೂ ಅನುಕರಣೆ ಮಾಡುತ್ತದೆ. ಈ ಅನುಕರಣೆಯನ್ನು ಸಕಾರಾತ್ಮಕವಾಗಿ ಪರಿವರ್ತಿಸುವ ಹೊಣೆ ಪಾಲಕರದು. ಸ್ವಲ್ಪ ತಿಳಿವಳಿಕೆ ಬಂದ ಮಗುವಿನ ಮುಂದೆ ಮನೆಯಲ್ಲಿರುವ ಪುಸ್ತಕದಲ್ಲಿ ಅಥವಾ ದಿನಪತ್ರಿಕೆಯಲ್ಲಿ ಬರುವ ಕಥೆಗಳನ್ನು, ಕುತೂಹಲಕರವಾಗಿ ಅದಕ್ಕೆ ಕೇಳಿಸುವಂತೆ ಓದಿದರೆ ಮಗು ಆನಂದಪಡುವುದಿಲ್ಲವೇ? ಹೌದು. ಇದಕ್ಕೆ ತಾಳ್ಮೆ ಬೇಕು. ಜೊತೆಗೆ ಮಗುವಿನೊಡನೆ ಸ್ವಲ್ಪ ಹೊತ್ತಾದರೂ ಕಳೆಯುವ ಪುರುಸೊತ್ತೂ ಬೇಕಲ್ಲವೇ? ಸ್ವಲ್ಪ ಮಟ್ಟಿಗೆ ತಿಳಿವಳಿಕೆ ಬಂದಿರುವ ಮಕ್ಕಳಿಗೆ ಕಾಣುವಂತೆ ಪುಸ್ತಕಗಳನ್ನು ಅಥವಾ ಪತ್ರಿಕೆಯನ್ನು ಇಟ್ಟು ನೋಡಿ. ಹೇಗೆ ಮಗುವಿನ ಸುಪ್ತ ಮನೋಭಾವನೆಗಳು ಗರಿಗೆದರಿ ಅವುಗಳನ್ನು ಓದಲು ಅದು ಪ್ರಯತ್ನಿಸುತ್ತದೆ! ಅವುಗಳಲ್ಲಿ ಇರುವ ಆಕರ್ಷಕ ಹಾಗೂ ವರ್ಣರಂಜಿತ ಚಿತ್ರಗಳು ಮಗುವನ್ನು ಆಕರ್ಷಿಸುತ್ತವೆ. ಆಗ ಮಗು ಅವನ್ನು ಎಸೆಯುವುದಿಲ್ಲ. ಮಗು ಮನೆಯ ನಾಲ್ಕು ಗೋಡೆಗಳ ನಡುವೆ ಬೌದ್ಧಿಕವಾಗಿ ಕಳೆಯುವ ಹೊತ್ತು ಕೇವಲ ಒಂದೆರಡು ಗಂಟೆಗಳು ಮಾತ್ರ. ಉಳಿದ ಸಮಯವನ್ನು ಅದು ನಿದ್ರೆಯಲ್ಲೋ ಆಟದಲ್ಲೋ ಕಳೆಯುತ್ತದೆ.

ಲೇಖಕರು ಹಾಸನ ಜಿಲ್ಲೆಯ ಉದಯಪುರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾಗಿದ್ದಾರೆ.

### ದೂರದರ್ಶನದ ಅಪಾಯ – ಕಥೆ ಹೇಳುವುದೇ ಉಪಾಯ

ದೂರದರ್ಶನದಲ್ಲಿ ಬರುವ ಧಾರಾವಾಹಿಗಳು ಮತ್ತು ಇಲ್ಲದ ಸಲ್ಲದ ಸುದ್ದಿಗೆ ರೆಕ್ಕೆ ಪುಕ್ಕ ಹಚ್ಚಿ ಹೇಳುವ ಛಾನಲ್‌ಗಳು ನಮಗೆ ಮೆಚ್ಚುಗೆಯಾದಂತೆ, ನಮ್ಮ ಮಕ್ಕಳೂ ಅವನ್ನು ಮೆಚ್ಚಬೇಕೆಂದು ನಾವು ಬಯಸುವುದು ಇಂದಿನ ದುರಂತ. ದೂರದರ್ಶನದಲ್ಲಿ ಮೇಲಿಂದ ಮೇಲೆ ತೋರಿಸುವ ಅಪಘಾತದ ದೃಶ್ಯಗಳು, ಭಯಾನಕ ಕಥೆಗಳು, ಅನೈತಿಕ ಘಟನೆಗಳು ಮಕ್ಕಳ ಮನಸ್ಸಿನ ಮೇಲೆ ಎಂಥ ಪರಿಣಾಮವನ್ನು ಬೀರಬಲ್ಲವು ಎಂಬುದನ್ನು ಊಹಿಸಿ ನೋಡಿ! ಇವು ಮಕ್ಕಳನ್ನು ಸಾಮಾಜಿಕ ಜವಾಬ್ದಾರಿಯಿಂದ ದೂರ ಒಯ್ಯಬಹುದು. ಸಾವು, ನೋವು, ದುರಂತ ಮುಂತಾದವನ್ನು ಪದೇ ಪದೇ ನೋಡಿದರೆ, ಮಕ್ಕಳಲ್ಲಿ ಇರಬೇಕಾದ, ಅಭಿವೃದ್ಧಿ ಹೊಂದಬೇಕಾದ ಮಾನಸಿಕ ಸೂಕ್ಷ್ಮತೆ ಹಂತಹಂತವಾಗಿ ಕಡಿಮೆಯಾಗುತ್ತಾ ಬರುತ್ತದೆಯೆಂಬುದು ಗಮನಿಸಬೇಕಾದ ಅಂಶ.

ಅದರ ಬದಲು ನಾವು ಓದಿದ ಕಥೆಯನ್ನೋ, ವಿಷಯವನ್ನೋ, ಮಗುವಿಗೆ ಆಕರ್ಷಕವಾಗಿ ಹೇಳಿದರೆ ಮಗು ಇಷ್ಟಪಡುವುದಿಲ್ಲವೇ? ಸುಳ್ಳು ಹೇಳಿದಂತೆಲ್ಲಾ ಮೂಗು ಉದ್ದವಾಗುತ್ತಾ ಹೋಗುವ ಪಿನೋಕಿಯೋ ಕಥೆ ಮಗುವಿನಲ್ಲಿರುವ ಸುಪ್ತಭಾವನೆಗಳನ್ನು ಕೆರಳಿಸುವುದಿಲ್ಲವೇ? ತಮ್ಮ ಪುಟ್ಟ ಪುಟ್ಟ ಬಾಣಗಳಿಂದ ಹೋರಾಡಿ ಚಿಕ್ಕ ಚಿಕ್ಕ ಹಗ್ಗಗಳಿಂದ ಗಲಿವರನನ್ನು ಕಟ್ಟಿಹಾಕುವ ಬುದ್ಧಿವಂತ ಲಿಲಿಪುಟ್‌ಗಳು ಮಕ್ಕಳಿಗೆ ಮನರಂಜನೆಯನ್ನು ನೀಡುವುದರ ಜೊತೆಗೆ ಗಂಭೀರವಾದ ಚಿಂತನೆಗೆ ಎಡೆಮಾಡಿಕೊಡಲಾರವೇ?

### ಮಕ್ಕಳ ಮೇಲೆ ಮಾಧ್ಯಮಗಳ ಭೀಕರ ಪ್ರಭಾವ

ದೂರದರ್ಶನದ ಛಾನಲ್‌ಗಳು ಮಕ್ಕಳಿಗೆ ಹೆಚ್ಚಿನ ಮನರಂಜನೆಯನ್ನು ಕೊಡುತ್ತವೆಂಬುದೇನೋ ನಿಜ. ಆದರೆ ಆ ಬಗೆಯ ಮನರಂಜನೆ ಮಗುವಿನ ಭಾವನಾತ್ಮಕ ಹಾಗೂ ರಚನಾತ್ಮಕ ಯೋಚನೆಗೆ ಒಂದು ಮಿತಿಯನ್ನು ನಿರ್ಮಿಸಿಬಿಡುತ್ತದೆ. ಮಕ್ಕಳ ಆರೋಗ್ಯದ ಮೇಲೆ ಮಾಧ್ಯಮಗಳ ಪ್ರಭಾವದ ಕುರಿತು ಅಮೇರಿಕದಲ್ಲಿ ೩೦ ವರ್ಷಗಳ ಕಾಲ ಒಂದು ಸಮೀಕ್ಷೆಯನ್ನು ನಡೆಸಲಾಯಿತು. ಈ ಸಂಶೋಧನೆಯಿಂದ ಒಂದು ಸರಳ ಆದರೆ ಅತಿ ಮುಖ್ಯವಾದ ಅಂಶವು ಬೆಳಕಿಗೆ ಬಂತು. ಬಹುತೇಕ ತಂದೆತಾಯಂದಿರಿಗೆ ಗೊತ್ತಿಲ್ಲದ ಒಂದು ವಿಷಯವನ್ನು ಇದು ಹೊರಗೆಡಹಿತು: ನಿಮ್ಮ ಮಗುವನ್ನು ೫ ಗಂಟೆಗಳ ಕಾಲ ಟಿ.ವಿ. ಅಥವಾ ಕಂಪ್ಯೂಟರ್ ಮುಂದೆ ಕೂಡಿಸಿದರೆ, ಅದರ

ಮಿದುಳಿನ ಬೆಳವಣಿಗೆ ಕುಂಠಿತವಾಗುತ್ತದೆ. ಅವುಗಳಲ್ಲಿ ಬರುವ ಚಲನಚಿತ್ರಗಳು, ವಿಡಿಯೋ ಗೇಮ್‌ಗಳು, ಅಬ್ಬರದ ಸಂಗೀತಗಳು ಹಾಗೂ ಇಂಟರ್‌ನೆಟ್‌ಗಳಿಂದ ಮಕ್ಕಳು ಅನವಶ್ಯವಾಗಿ ಸ್ಥೂಲಕಾಯದವರಾಗುತ್ತಾರೆ. ಅದಕ್ಕೂ ಭೀಕರ ಅಂಶವೆಂದರೆ ಅವರು ತಂಬಾಕು, ಮದ್ಯ ಹಾಗೂ ಮಾದಕ ವಸ್ತುಗಳ ಚಟಗಳಿಗೆ ಬಲಿಯಾಗುತ್ತಾರೆ ಹಾಗೂ ಲೈಂಗಿಕ ಚಟುವಟಿಕೆಗಳ ಅಪಾಯವೂ ಇರುತ್ತದೆ. ಅದಕ್ಕಾಗಿಯೇ ಟಿ.ವಿ.ಯನ್ನು **ಮೂರ್ಖರ ಪೆಟ್ಟಿಗೆ** ಎಂದು ಕರೆಯುವುದು. **ಮಕ್ಕಳು ಮನೆಯಲ್ಲಿ ಇದ್ದಾಗ ಆದಷ್ಟುಮಟ್ಟಿಗೆ ನಿಮ್ಮ ಟಿ.ವಿ. ಸೆಟ್‌ಗಳನ್ನು ಆರಿಸಿಬಿಡಿ; ಕಂಪ್ಯೂಟರ್‌ನಿಂದ ವಿಡಿಯೋ ಗೇಮ್‌ಗಳನ್ನು, ಇಂಟರ್‌ನೆಟ್ ಅನ್ನು ತೆಗೆದುಹಾಕಿ.**

## ಭೃಂಗದ ಬೆನ್ನೇರಿ ಬಂತು ಕಲ್ಪನಾವಿಲಾಸ

ಮಕ್ಕಳ ಕಾಲ್ಪನಿಕ ಭಾವನೆಗಳಿಗೆ ಟಿ.ವಿ. ಮೊದಲಾದ ಮಾಧ್ಯಮಗಳು ಒಂದು ಪರಿಧಿಯನ್ನು ನಿರ್ಮಿಸಿಬಿಡುತ್ತವೆ. ಪರದೆಯ ಮೇಲೆ ಕಾಣಬರುವ ಹನುಮಂತನ ಪಾತ್ರವನ್ನು ನೋಡಿ ಮಕ್ಕಳು ಹನುಮಂತನೆಂದರೆ ಇಷ್ಟೇ ಎಂದುಕೊಂಡುಬಿಡುತ್ತಾರೆ. ಆದರೆ ತಾನು ಓದಿದ ಅಥವಾ ಕೇಳಿದ ಕಥೆಯನ್ನು ಮನನ ಮಾಡಿ ಅಗಾಧವಾದ ಕಲ್ಪನಾಸಾಮ್ರಾಜ್ಯದಲ್ಲಿ ತೇಲಿ ಹೋಗುವ ಮಕ್ಕಳ ಕಲ್ಪನೆಗೆ ಎಲ್ಲೆಯೇ ಇರುವುದಿಲ್ಲವೆಂಬುದು ಎಲ್ಲರಿಗೂ ತಿಳಿದ ವಿಷಯ. ಈ ಕಲ್ಪನೆಗೆ ಸಮಯದ ಪರಿವೆಯಿಲ್ಲದಿರುವುದರಿಂದ ಮಗುವು ಮಾನಸಿಕವಾಗಿ ಬೆಳೆಯುತ್ತದೆಯೆಂಬುದು ನೆನಪಿರಲಿ.

೨–೩ ವರ್ಷದ ಮಗು ಕಾಗಕ್ಕ–ಗುಬ್ಬಕ್ಕರ ಕಥೆಯನ್ನು ಇಷ್ಟಪಡುತ್ತದೆ. ೪ ರಿಂದ ೭ ವರ್ಷದವರೆಗೆ ಚಂದಮಾಮ ಕಥೆಗಳನ್ನು ಕೇಳಿ ಆನಂದಿಸುತ್ತದೆ. ಇದೇ ತಿರುವಿನ ಕಾಲ. ಮಗುವಿಗೆ ಈ ಕಥೆಗಳು ಯಾವ ಪುಸ್ತಕದಿಂದ ಎರವಲು ಪಡೆದವೆಂದು ತಿಳಿದರೆ ಸಾವಕಾಶವಾಗಿ ಆ ಪುಸ್ತಕವನ್ನು ಓದಿ ಆನಂದಿಸಲು ಪ್ರಯತ್ನಿಸುತ್ತದೆ. ಈ ವಯಸ್ಸಿನಲ್ಲಿ ನಾವು ಇಂತಹ ಪುಸ್ತಕಗಳನ್ನು ಬೀರುವಿನಲ್ಲೋ ಗಾಜಿನ ಕಪಾಟಿನಲ್ಲೋ ಇಟ್ಟು ಬೀಗ ಹಾಕಿ, ಮನೆಗೆ ಬರುವ ಸ್ನೇಹಿತರ ಎದುರು ಪ್ರದರ್ಶನಕ್ಕೆ ಜೋಡಿಸಿದಲ್ಲಿ, ಮಗು ಓದುವ ಹವ್ಯಾಸವನ್ನು ಹೇಗೆ ತಾನೇ ಬೆಳೆಸಿಕೊಳ್ಳುತ್ತದೆ?

ಪುಸ್ತಕಗಳು ಮಗುವಿನ ಕೈಗೆ ಎಟಕುವಂತಿರಬೇಕು. ಜೊತೆಗೆ ಅವುಗಳನ್ನು ಅಂದವಾಗಿ ಜೋಡಿಸಿಟ್ಟಿರಬೇಕು. ನಿತ್ಯವೂ ಬರುವ ದಿನಪತ್ರಿಕೆಯನ್ನು ಓದಿದ ಮೇಲೆ ಓರಣವಾಗಿ ಎತ್ತಿಟ್ಟರೆ ನಮ್ಮ ಕೆಲಸ ಮುಗಿಯಿತು. ಆದರೆ ಮಕ್ಕಳು ಇಷ್ಟಪಡುವ ವಿಷಯವಾಗಲಿ, ಚಿತ್ರವಾಗಲಿ ಅದರಲ್ಲಿವೆಯೇ ಎಂದು ನಾವೇಕೆ ಯೋಚಿಸುವುದಿಲ್ಲ? ಅಂತಹ ಭಾಗವನ್ನು ಮಗುವಿನ ಆಸಕ್ತಿಗೆ ಅನುಗುಣವಾಗಿ ಅದಕ್ಕೆ ಕಾಣುವಂತೆ ಇಟ್ಟುಬಿಡಿ. ಆಗ ಮಗುವೇ ಕುತೂಹಲದಿಂದ ಅದನ್ನು ತೆಗೆದು ನೋಡಿ ಅರ್ಥೈಸಿಕೊಳ್ಳಲು ಪ್ರಯತ್ನಿಸಬಹುದು ಇಲ್ಲವೇ ನಿಮ್ಮನ್ನು ಕೇಳಿ ತಿಳಿದುಕೊಳ್ಳಲು ಪ್ರಯತ್ನಿಸಬಹುದು. ನಿಮ್ಮ ಅಮೂಲ್ಯವಾದ ಸಮಯ ಇದೇ. ಮಗುವಿಗೆ ತಾಳ್ಮೆಯಿಂದ ವಿವರಿಸಿ ಕುತೂಹಲ ಕೆರಳಿಸುವ ಪ್ರಯತ್ನ ನಿಮ್ಮದಾಗಲಿ.

ಚಂದ್ರಕಾಂತಾ ಕಾದಂಬರಿ ಸರಣಿ ಹಿಂದಿ ಸಾಹಿತ್ಯದಲ್ಲಿ ಒಂದು ಅದ್ಭುತ ಕಾದಂಬರಿ ಶ್ರೇಣಿ. ಬಾಬು ದೇವಕಿ ನಂದನ ಖತ್ರಿಯವರ ಈ ಕಾದಂಬರಿ ಹನ್ನೊಂದು ಭಾಗಗಳನ್ನು ಒಳಗೊಂಡಿದೆ. ಇದು ಹಿಂದೀ ಸಾಹಿತ್ಯದಲ್ಲಿ ಕ್ರಾಂತಿಯನ್ನೇ ಎಬ್ಬಿಸಿತ್ತು. ಒಂದು ದೃಷ್ಟಿ ಯಲ್ಲಿ ಇದರಲ್ಲಿ ಸಾಹಿತ್ಯಿಕವಾದ ಅಂಶ ಯಾವುದೂ ಇಲ್ಲ. ಆದರೆ ಒಂದು ಭಾಗದಿಂದ ಮತ್ತೊಂದು ಭಾಗಕ್ಕೆ ಆಸಕ್ತಿ ಕೆರಳಿಸುವ ಅಂಶ ಮಾತ್ರ ಅದ್ಭುತ! ಇಂತಹ ಕುತೂಹಲಕಾರಿ ಪುಸ್ತಕಗಳು ನಮ್ಮಲ್ಲಿ ಎಷ್ಟೋ ಇವೆ. ನಾವು ಅವನ್ನೆಲ್ಲ ನಮ್ಮ ಮಕ್ಕಳ ಮುಂದೆ ತೆರೆದಿಡುತ್ತಿದ್ದೇವೆಯೇ? ಹ್ಯಾರಿ ಪಾಟರ್, ಬ್ಯಾಟ್‌ಮನ್ ಮುಂತಾದ ಕಥೆಗಳಿಗಿಂತ ಅದ್ಭುತವಾದ ಕಲ್ಪನೆ ನಮ್ಮ ದೇಶೀ ಕಥೆಗಳಲ್ಲಿವೆ.

## ಸಂಸ್ಕೃತಿಯ ಆಕರಗಳು – ಹಿರಿಯರ ಅನುಭವಗಳು

ರಾಮಾಯಣ ಮತ್ತು ಮಹಾಭಾರತಗಳ ಕಥೆಗಳಂತೂ ಎಲ್ಲಾ ಕಾಲಕ್ಕೂ, ಎಲ್ಲಾ ವಯಸ್ಸಿನವರಿಗೂ ಮೆಚ್ಚಿಗೆ ಆಗುವಂಥವು. ಚಿಕ್ಕ ಮಕ್ಕಳಲ್ಲಿ ಅವು ಹುಟ್ಟಿಸುವ ಕುತೂಹಲಕ್ಕೂ, ದೊಡ್ಡವರಲ್ಲಿ ಇವು ಉಂಟುಮಾಡುವ ಭಾವನಾತ್ಮಕ ಹಾಗೂ ವೈಚಾರಿಕ ನಿಲುವಿಗೂ, ನಾವು ಅಚ್ಚರಿಪಡುವಂತಾಗುತ್ತದೆ. ವರ್ಷಗಳಿಂದಲೂ ಇದು ಬೀರುತ್ತಿರುವ ಪರಿಣಾಮ ಹಾಗೂ ಕುತೂಹಲ ಮಾತ್ರ ಅನನ್ಯ. ಮಕ್ಕಳ ಮನಸ್ಸಿನಲ್ಲಿ ಇದರ ಪ್ರತಿಯೊಂದು ಉಪಕಥೆಯೂ ಕುತೂಹಲವನ್ನು ಅರಳಿಸುವುದರ ಜೊತೆಗೆ, ನೈತಿಕ ಜವಾಬ್ದಾರಿಯನ್ನೂ ಎತ್ತಿ ತೋರಿಸುತ್ತವೆ. ಇನ್ನು ಪಂಚತಂತ್ರದ ಕಥೆಗಳಂತೂ ಎಳವೆಯಲ್ಲೇ ಮಕ್ಕಳನ್ನು ವಿಸ್ಮಯ ತುಂಬಿದ ಪ್ರಾಣಿಲೋಕಕ್ಕೆ ಒಯ್ಯುತ್ತವೆ. ಈಸೋಪನ ನೀತಿಕಥೆಗಳು, ಬೊರೊನ್ ಮಾಂಕ್‌ಹೌಸನ ವಿಚಿತ್ರ ಕಥೆಗಳು, ಅರೇಬಿಯನ್ ನೈಟ್ಸ್‌ನಲ್ಲಿ ಬರುವ ಸಾವಿರದೊಂದು ರಾತ್ರಿಯ ಕಥೆಗಳು ಕೂಡ ಮಕ್ಕಳನ್ನು ಯಾವುದೋ ಕಲ್ಪನಾಲೋಕಕ್ಕೆ ಒಯ್ಯುತ್ತವೆ.

ಹಿರಿಯರಾದ, ಮಾರ್ಗದರ್ಶಕರಾದ ನಮ್ಮಲ್ಲಿ ಓದುವ ಹವ್ಯಾಸವಿರಬೇಕೆಂಬುದನ್ನು ಮರೆಯಬಾರದು. ನಮ್ಮ ಮಕ್ಕಳ ಸಲುವಾದರೂ ನಾವು ಓದಬೇಕು. ವೃದ್ಧಾಪ್ಯದ ಏಕಮೇವ ಸಂಗಾತಿ ಪುಸ್ತಕವೆಂಬುದನ್ನು ಮರೆಯಬೇಡಿ. ಆ ಕಾಲದಲ್ಲಿ ಬೇರೆ ಹವ್ಯಾಸಗಳಿಗೆ ಶಕ್ತಿ ಇರುವುದಿಲ್ಲ. ಓದುವ ಈ ಅಮೂಲ್ಯ ಹವ್ಯಾಸವನ್ನು ಬೆಳೆಸಿಕೊಂಡಲ್ಲಿ ನಮಗೇ ಅನುಕೂಲ. ಅದಕ್ಕಾಗಿಯೇ ಮಕ್ಕಳು ಅಜ್ಜ, ಅಜ್ಜಿಯರನ್ನು ಹೆಚ್ಚಾಗಿ ಹಚ್ಚಿಕೊಳ್ಳುವುದು. ಅವರು ಹೇಳುವ ಕಥೆಗಳು, ಅವರ ಬಾಲ್ಯದಲ್ಲಿ ನಡೆದ ಘಟನೆಗಳು ಮಕ್ಕಳಿಗೆ ದೊರೆಯುವ ಅತಿ ದೊಡ್ಡ ಮನರಂಜನೆ, ಆಕರ್ಷಣೆ. ಆದರೆ ಇಂದಿನ ಸಮಾಜದಲ್ಲಿರುವ ಚಿಕ್ಕಚಿಕ್ಕ ಕುಟುಂಬಗಳಲ್ಲಿ ಅಜ್ಜಅಜ್ಜಿಯರು ಎಲ್ಲಿಂದ ಬರಬೇಕು? ಈ ಸ್ಥಾನವನ್ನು ತಂದೆ ತಾಯಿಯರೇ ತುಂಬಬೇಕು. ಪರಸ್ಪರ ಮಾನವರನ್ನು ಜೋಡಿಸುವ ಸೂಕ್ಷ್ಮಕೊಂಡಿ ಇಲ್ಲಿಂದಲೇ ಆರಂಭವಾಗಬೇಕು. ದೈನಂದಿನ ಬದುಕಿನಲ್ಲಿ ನರಳಿ, ಕಿರಿಯರ ಅಸಡ್ಡೆಗೆ ಬೇಸತ್ತು ವೃದ್ಧಾಶ್ರಮವನ್ನು ಸೇರಬಯಸುವ ಹಿರಿಯರನ್ನು ಮನೆಯಲ್ಲೇ ಇಟ್ಟುಕೊಂಡು, ಮಕ್ಕಳ ಭವಿಷ್ಯ ರೂಪಿಸುವಲ್ಲಿ ಅವರಿಗೆ ಸಲ್ಲಬೇಕಾದ ಪಾತ್ರವನ್ನು ನಾವು ಏಕೆ ನೀಡಬಾರದು?